# ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಚಿಕ್ಕಬಳ್ಳಾಪುರ, ಕಾರ್ಯಸ್ಥಾನ ಚಿಂತಾಮಣಿ.

## ಎಸ್.ಸಿ. ನಂಃ 35/2023

| | | | |
|---|---|---|---|
| **ಸಾಕ್ಷಿದಾರರ ಹೆಸರುಃ** | ಸುಧಾಕರ | ಫ್ರಾಸಾಃ | 09 |
| **ತಂದೆಯ ಹೆಸರುಃ** | ನರಸಪ್ಪ | ಚಾಸಾಃ | 09 |
| **ವಯಸ್ಸುಃ** | 35 | ಪ್ರಮಾಣ ವಚನ ಭೋದಿಸಿದ ದಿನಾಂಕ: | 20-09-2025 |
| **ಉದ್ಯೋಗಃ** | ಖಾಸಗಿ | | |
| **ವಾಸ ಸ್ಥಳಃ** | ವೈಗೊಲ್ಲಹಳ್ಳಿ | | |

### ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

*ನಿಪಿ-2ರಲ್ಲಿರುವ ಸಹಿ ನನ್ನದೇ. ಅದನ್ನು ನಿಪಿ-2(ಸಿ) ಎಂದು ಗುರುತಿಸಲಾಯಿತು. ಸುಮಾರು 3 ವರ್ಷದ ಹಿಂದೆ ಆರೋಪಿತರು ಚಾಸಾ-1 ರವರ ಮೇಲೆ ಹಲ್ಲೆ ಮಾಡಿದ್ದ ಬಾಬ್ತು ಪೋಲಿಸರು ಘಟನಾ ಸ್ಥಳಕ್ಕೆ ಬಂದಿದ್ದು, ನಿಪಿ-2 ಮಹಜರ್ ಕ್ರಮ ಜರುಗಿಸಿದ್ದರು. ಮಹಜರ್ ಮಾಡುವ ಸಂದರ್ಭದಲ್ಲಿ ಚಾಸಾ-6 ರವರ ಅಂಗಡಿಯಲ್ಲಿ ಮು.ಮಾ.01 ರಿಂದ ಮು.ಮಾ.04 ಮತ್ತು ಮು.ಮಾ.06, ಮು.ಮಾ.07 ಇತ್ತು. ಪೋಲಿಸರು ಆಯುಧಗಳನ್ನು ಹಾಗೂ ಮಣ್ಣು , ರಕ್ತದ ಮಣ್ಣು ಅಮಾನತ್ತು ಪಡಿಸಿಕೊಂಡರು. ಚಾಸಾ-10 ಕೂಡ ನನ್ನೊಂದಿಗೆ ಪಂಚನಾಗಿ ಸಹಿ ಮಾಡಿದ್ದಾನೆ. ಸಾಕ್ಷಿ ಮು.ಮಾ.01 ರಿಂದ ಮು.ಮಾ.4, ಮು.ಮಾ.06 ಮತ್ತು ಮು.ಮಾ.7 ನ್ನು ಗುರುತಿಸಿರುತ್ತಾರೆ.*

**ಪಾಟೀ ಸವಾಲುಃ 5 ನೇ ಆರೋಪಿ ಪರ ಶ್ರೀ.ಎಂ.ಎಸ್.ಸಿ ವಕೀಲರಿಂದ ಪಾಟೀ ಸವಾಲು**

ಪೋಲಿಸರು ನನಗೆ ಲಿಖಿತ ನೋಟಿಸ್ ಕೊಟ್ಟಿರಲಿಲ್ಲ. ಫೋನ್ ನಲ್ಲಿ ಕರೆದಿದ್ದರು. ಮು.ಮಾಲುಗಳ ಮೇಲೆ ನನ್ನ ಸಹಿ ಪಡೆದುಕೊಳ್ಳಲಿಲ್ಲ. ದೊಣ್ಣೆಗಳು ಎಲ್ಲಾ ಕಡೆ ಸಿಗುತ್ತವೆ ಎಂದರೆ ಸರಿ. ಸದರಿ ಮು.ಮಾಲುಗಳು ಎಷ್ಟು ಸಮಯದಿಂದ ಅಲ್ಲಿದ್ದವು ಎಂದು ನಾನು ತಿಳಿದುಕೊಳ್ಳಲಿಲ್ಲ. ಚಾಸಾ-1 ಹಾಗೂ ಆರೋಪಿತರು ಕಾಂಗ್ರೆಸ್ ಹಾಗೂ ಜೆಡಿಎಸ್ ಪಕ್ಷದವರಾಗಿದ್ದು ನಡುವೆ ರಾಜಕೀಯ ದ್ವೇಷಗಳಿವೆ ಎಂದರೆ ಸರಿಯಲ್ಲ. ನನಗೆ ಆರೋಪಿತರ ಹೆಸರು ಗೊತ್ತಿಲ್ಲ. ನಾನು ಈ ದಿನ ಚಾಸಾ-1 ರವರ ಜೊತೆ ಬಂದಿದ್ದೇನೆ ಎಂದರೆ ಸರಿ. ನನಗೆ ಈ ಕೇಸಿನ ಬಗ್ಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಚಾಸಾ-1 ರವರ ಮಾತು ಕೇಳಿ, ಆರೋಪಿಗಳಿಗೆ ತೊಂದರೆ ಕೊಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಮು.ಮಾ.01 ರಿಂದ 7 ನ್ನು ನನ್ನ ಮುಂದೆ ಅಮಾನತ್ತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ.

**ಉಳಿದ ಆರೋಪಿ ಪರ ವಕೀಲರು ಗೈರು ಹಾಜರು ಹೀಗಾಗಿ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

**ಮರು ವಿಚಾರಣೆಃ ..... ಇಲ್ಲ .....**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು) ಓ.ಹೇ.ಕೇ. ಸರಿ ಇದೆ.

ಸಹಿ/-

ದಿಃ20.09.2025 **(ಕೆ.ಎಂ.ರಾಜಶೇಖರ)**
ಸ್ಥಳಃ ಚಿಂತಾಮಣಿ ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಬಳ್ಳಾಪುರ, ಕಾರ್ಯಸ್ಥಾನ ಚಿಂತಾಮಣಿ.